೧) *ವಿಜಾಪುರ ನಗರ ಮನೆ ತೆರಿಗೆ ನಿಗದಿ ಪಡಿಸುವಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

೨) *ಮನೆ ತೆರಿಗೆ ಪರಿಷ್ಕರಣೆ ವಿರುದ್ಧ ಸಾರ್ವಜನಿಕರು ನ್ಯಾಯಾಲಯದಲ್ಲಿ ದಾವೆ ಹೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

೩) *ಇದಕ್ಕೆ ಪರಿಹಾರವಾಗಿ ಪುನರ್ ಪರಿಷ್ಕೃತ ತೆರಿಗೆಯನ್ನು ರದ್ದು ಪಡಿಸುವುದು ಸರ್ಕಾರದ ಪರಿಶೀಲನೆಯಲ್ಲಿದಯೇ?*

೪) *ತೆರಿಗೆ ನಿಗಧಿಪಡಿಸುವಲ್ಲಿ ಇಟ್ಟ ಅಳತೆ ಗೋಲುಗಳು ಯಾವುವು?*

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ, ಕಾಡಾ, ಮತ್ತು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

೧) ಇಲ್ಲಾ.

೨) ಹೌದು.

೩) ಇಂತಹ ಪ್ರಸ್ತಾವನೆ ಯಾವುದು ಇರುವುದಿಲ್ಲ, ಕಾರಣ ವಿಷಯವು ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ.

೪) ಕರ್ನಾಟಕ ಪುರಸಭೆ ಕಾಯ್ದೆ ೧೯೬೪ರ ಕಲಂ ೧೦೬ರಲ್ಲಿ ನಿಗಧಿಪಡಿಸಿರುವಂತೆ.

ಸಣ್ಣ ಕೈಗಾರಿಕೆಗಳಿಂದ ಎಣ್ಣೆ ಉತ್ಪಾದಿಸುವವರಿಗೆ ಸಹಾಯ ಧನ

೫೭೭ - ಶ್ರೀ ಬಸನಗೌಡ ಪಾಟೀಲ (ವಿಜಾಪುರ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಣ್ಣ ಕೈಗಾರಿಕೆಯಲ್ಲಿ ಬರುವ ಎಣ್ಣೆ ಉತ್ಪಾದಕರಿಗೆ ಈ ಹಿಂದೆ ಸಿಗುತ್ತಿದ್ದ ೨೦ ಪ್ರತಿ ಶತ ಸಹಾಯಧನವನ್ನು ಸರ್ಕಾರ ನಿಲ್ಲಿಸಲು ಕಾರಣಗಳೇನು?*

ಆ) *ಮತ್ತೆ ಪುನರಾರಂಭಿಸುವ ಯಾವುದೇ ವಿಚಾರ ಪರಿಶೀಲನೆಯಲ್ಲಿದೆಯೇ, ಇದ್ದಲ್ಲಿ ಯಾವಾಗ.*

ಇ) *ಸದರಿ ಎಣ್ಣೆ ಉದ್ದಿಮೆಗೆ ಈ ಮೊದಲು ಇದ್ದ ಪ್ರತಿ ಶತ ೫೦ ಮಾರಾಟ ತೆರಿಗೆ ವಿನಾಯಿತಿಯನ್ನು ತೆಗೆದು ಹಾಕಿದ್ದುದಕ್ಕೆ ಕಾರಣಗಳೇನು.*

ಈ) *ಸದರೀ ತೆರಿಗೆ ವಿನಾಯಿತಿಯನ್ನು ಪುನರಾರಂಭಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ, ಇದ್ದಲ್ಲಿ ಯಾವಾಗ?*

ಶ್ರೀ ಎನ್. ಎಂ. ನಬೀ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು)

ಅ) ಎಣ್ಣೆ ಉತ್ಪಾದನಾ ಕೈಗಾರಿಕಾ ಘಟಕಗಳು ಎಣ್ಣೆ ಬೀಜದ ಲಭ್ಯತೆಯ ಕೊರತೆಯಿಂದ ತೊಂದರೆ ಅನುಭವಿಸುತ್ತಿದೆ. ಹಳೆಯ ಮತ್ತು ಕಾರ್ಯನಿರ್ವಹಿಸುತ್ತಿರುವ ಕೈಗಾರಿಕಾ ಘಟಕಗಳು

ಹಿತರಕ್ಷಣೆಗೋಸ್ಕರ ಶೇಕಡ ೨೦ ಸಬ್ಸಿಡಿ ನೀಡಿ ಹೊಸ ಘಟಕಗಳ ಸ್ಥಾಪನೆಗೆ ಸರ್ಕಾರ ಉತ್ತೇಜನ ನೀಡುತ್ತಿಲ್ಲ.

ಆ) ಸದ್ಯದಲ್ಲಿಯೇ ಹೊಸ ಕೈಗಾರಿಕಾ ನೀತಿಯನ್ನು ಪ್ರಕಟಿಸುವ ಯೋಜನೆ ಇದೆ. ಎಣ್ಣೆ ಬೀಜ ಬೆಳೆಯುವ ಪ್ರದೇಶಗಳಲ್ಲಿ ಸಣ್ಣ ಕೈಗಾರಿಕಾ ಘಟಕಗಳ ಸ್ಥಾಪನೆಗೆ ಉತ್ತೇಜನ ನೀಡುವಂತಹ ಪರ್ಯಾಯ ವ್ಯವಸ್ಥೆ ಬಗ್ಗೆ ಕ್ರಮ ಕೈಗೊಳ್ಳಲು ಸದರೀ ನೀತಿಯಲ್ಲಿ ಯೋಜಿಸಲಾಗುತ್ತಿದೆ.

ಇ) ಹೊಸ ಎಣ್ಣೆ ಕೈಗಾರಿಕಾ ಘಟಕಗಳಿಗೆ ೧೯೯೩ರ ಕೈಗಾರಿಕಾ ನೀತಿ ಪ್ರಕಾರ ಉತ್ತೇಜನ ಇಲ್ಲದೇ ಇರುವುದರಿಂದ ಮಾರಾಟ ತೆರಿಗೆ ವಿನಾಯಿತಿ ಸಹ ಉತ್ತೇಜನ ಕಾರ್ಯಕ್ರಮದಲ್ಲಿ ಇರುವುದಿಲ್ಲ.

ಈ) ಮಾರಾಟಕರ ವಿನಾಯಿತಿ ಪ್ರೋತ್ಸಾಹ ೧೯೯೩-೯೮ರ ಕೈಗಾರಿಕಾ ನೀತಿಯಲ್ಲಿ ಇರುವುದಿಲ್ಲ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಯೋಜನೆಗಳು

೫೮೦ - ಶ್ರೀ ಜೆ.ಬಸವಣ್ಣಪ್ಪ (ಹೊಳಿಹೊನ್ನೂರು) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಕೇಂದ್ರ ಸರಕಾರವನ್ನು ಎಷ್ಟು ಯೋಜನೆಗಳಿಗೆ ಮಂಜೂರಾತಿ ಕೋರಿತ್ತು. (ಯೋಜನೆಗಳ ಹೆಸರು ಮತ್ತು ವಿವರಗಳನ್ನು ತಿಳಿಸಿ)

ಆ) ಅದರಲ್ಲಿ ಕೇಂದ್ರ ಸರಕಾರದಿಂದ ಮಂಜೂರಾತಿ ಪಡೆದಿರುವ ಯೋಜನೆಗಳೆಷ್ಟು?

ಇ) ಈ ಯೋಜನೆಗಳ ಒಟ್ಟು ವೆಚ್ಚ ಎಷ್ಟು?

ಶ್ರೀ ಬಿ.ಟಿ. ಲಲಿತಾನಾಯಕ್ (ಕನ್ನಡ ಸಂಸ್ಕೃತಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ಒಂದು : ಗ್ರಾಮೀಣ ಮಹಿಳೆಯರ ಆರ್ಥಿಕ ಅಭಿವೃದ್ಧಿ ಮತ್ತು ಸ್ವಾವಲಂಬನೆ ಯೋಜನೆ ಈ ಯೋಜನೆಯಲ್ಲಿ ಕೇಂದ್ರ ಸರಕಾರವು ಚಿತ್ರದುರ್ಗ, ಕೋಲಾರ ಮತ್ತು ಬಳ್ಳಾರಿ ಜಿಲ್ಲೆಗಳನ್ನು ಆಯ್ಕೆ ಮಾಡಿದ್ದು, ಈ ಯೋಜನೆಯಿಂದ ೪೫ ಸಾವಿರ ಮಹಿಳೆಯರ ಪ್ರಯೋಜನವನ್ನು ಪಡೆಯಲಿದ್ದಾರೆ. ಈ ಯೋಜನೆಯಲ್ಲಿ ಭೂ ಅಭಿವೃದ್ಧಿ, ಕೃಷಿ, ಚಟುವಟಿಕೆ,ಕೃಷಿಗೆ ಪೂರಕವಾದ ಚಟುವಟಿಕೆ ಮತ್ತು ಗೃಹ ಕೈಗಾರಿಕೆಗಳ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿರುತ್ತದೆ. ಈ ಯೋಜನೆಯನ್ನು ೬ ವರ್ಷಗಳಲ್ಲಿ ಜಾರಿಗೊಳಿಸಲು ಉದ್ದೇಶಿಸಿದ್ದು ಯೋಜನೆಯ ೨೫ ರಷ್ಟು ಹಣವನ್ನು ಸಂಘಟನಾ ಸಂಸ್ಥೆಯಿಂದ ಸಾಲದ ರೂಪದಲ್ಲಿಯೂ ಮತ್ತು ೧೫ ರಷ್ಟು ಜಿಲ್ಲಾ ಗ್ರಾಮೀಣಾಭಿವೃದ್ಧಿ ಸಂಸ್ಥೆಗಳಿಂದ, ಬ್ಯಾಂಕುಗಳಿಂದ, ರಾಜ್ಯ ಸರಕಾರದ ಮತ್ತು ಇತರ ಮೂಲಗಳಿಂದ ಸಹಾಯಧನ ರೂಪದಲ್ಲಿ ಇರುತ್ತದೆ.